**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.1687/2019**

**ದಿನಾಂಕಃ 05.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| ಸಾಕ್ಷಿಯ ಹೆಸರು ಃ | ಎಸ್ ಕೆ ಶ್ರೀಧರ | ಡಿ ಡಬ್ಲೂ-2 |
|---|---|---|
| ತಂದೆಯ  ಹೆಸರು ಃ | ಕುಮಟೇಗೌಡ | |
| ವಯಸ್ಸು ಃ | 46 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಶ್ರೀನಿವಾಸಪುರ | |

**ಮುಖ್ಯ ವಿಚಾರಣೆಃ  ಆರೋಪಿ ಪರ ಶ್ರೀ ಸಿ ಎನ್ ಸಿ ವಕೀಲರಿಂದ ಃ**

ಆರೋಪಿ ಗೊತ್ತು, ಅವರು ನಮ್ಮ ಊರಿನವರು.  ನನಗೆ ಈ ಪ್ರಕರಣದ ಪಿರ್ಯಾದುದಾರರು ಗೊತ್ತಿಲ್ಲ.  ಪಿರ್ಯಾದುದಾರರು ಆರೋಪಿ ವಿರುದ್ದ ಈ ಚೆಕ್ ಅಮಾನ್ಯ ಪ್ರಕರಣವನ್ನು ದಾಖಲಿಸಿರುತ್ತಾರೆ. ನಿಪಿ-1 ರ ಚೆಕ್ಕನ್ನು ನಾನು ಮತ್ತು ಆರೋಪಿಯು ಸಖರಾಯಪಟ್ಟಣದ ನಾಗರಾಜ್ ರವರಿಗೆ ಸುಮಾರು 10 ವರ್ಷಗಳ ಹಿಂದೆ ನೀಡಿರುತ್ತೇವೆ.  ಆರೋಪಿಯು ನಾಗರಾಜ್ ರವರಿಂದ ಸಾಲವನ್ನು ಪಡೆದುಕೊಂಡಿದ್ದು ಅದರ ಭದ್ರತೆಗಾಗಿ ನಿಪಿ-1 ರ ಚೆಕ್ಕನ್ನು ನಾಗರಾಜ್ ರವರಿಗೆ ನೀಡಿರುತ್ತಾರೆ.  ನಂತರ ಆರೋಪಿಯು ನಾಗರಾಜ್ ರವರಿಂದ ಪಡೆದ ಸಾಲವನ್ನು ಮರುಪಾವತಿ ಮಾಡಿರುತ್ತಾರೆ.  ಆರೋಪಿಯು ಸಾಲವನ್ನು ಮರುಪಾವತಿ ಮಾಡಲು ಹೋದಾಗ ಅವರ ಜೊತೆ ನಾನೂ ಹೋಗಿರುತ್ತೇನೆ.  ಆರೋಪಿ ನಾಗರಾಜ್ ರವರಲ್ಲಿ ನಿಪಿ-1 ರ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಅವರು ಕ್ಷುಲ್ಲಕ ಕಾರಣ ನೀಡಿ ಚೆಕ್ಕನ್ನು ಹಿಂದಿರುಗಿಸದೇ ಕಾಲಹರಣ ಮಾಡಿರುತ್ತಾರೆ.  ನನ್ನ ಅಭಿಪ್ರಾಯದಲ್ಲಿ ಆರೋಪಿಯು ಪಿರ್ಯಾದುದಾರರಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ ಮತ್ತು ನಿಪಿ-1 ರ ಚೆಕ್ಕನ್ನು ನೀಡಿರುವುದಿಲ್ಲ.  ಪಿರ್ಯಾದುದಾರರನ್ನು ನಾನು ಈ ಹಿಂದೆ ಯಾವತ್ತೂ ನೋಡಿರುವುದಿಲ್ಲ.  ಅವರು ಸಖರಾಯಪಟ್ಟಣದಲ್ಲಿ ವಾಸವಾಗಿರುವುದಿಲ್ಲ.  ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ.

**ಪಾಟೀಸವಾಲುಃ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.